9.	ಘನತ್ಯಾಜ್ಯ ವಸ್ತು ವಿಲೇವಾರಿ ಜಮೀನಿನಲ್ಲಿ ಕಾಂಪೌಂಡ್ ವಾಲ್ ನಿರ್ಮಾಣ ಮಾಡುವುದು (ಹಂತ–4)	6.56	ತಳಪಾಯದ ಹಂತದಲ್ಲಿರುತ್ತದೆ.
2013–14ನೇ ಸಾಲಿನ ಎಸ್.ಎಫ್.ಸಿ. ಅನುದಾನದಲ್ಲಿ			
10.	ಘನತ್ಯಾಜ್ಯ ವಸ್ತು ವಿಲೇವಾರಿ ಪ್ರದೇಶ ಸುತ್ತ (ಹೊರಬಾಗ) ಚರಂಡಿ ನಿರ್ಮಾಣ	10.00	ಟೆಂಡರ್ ಕರೆಯಬೇಕಿರುತ್ತದೆ.
11.	ಘನತ್ಯಾಜ್ಯ ವಸ್ತು ವಿಲೇವಾರಿ ಪ್ರದೇಶ ಸುತ್ತ ಆಂತರಿಕ ರಸ್ತೆಗಳಿಗೆ ಎರಡೂ ಬದಿ ಚರಂಡಿ ನಿರ್ಮಾಣ	3.39	ಟೆಂಡರ್ ಕರೆಯಬೇಕಿರುತ್ತದೆ.

ಇ) 6 ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು.

ನಗರೋತ್ಥಾನ ಕಾಮಗಾರಿಗಳು

240(438); ಶ್ರೀ ಬಣಕಾರ್ ಯು.ಬಿ (ಹಿರೇಕೆರೂರು)

ಅ) ಹಾವೇರಿ ಜಿಲ್ಲೆಯಲ್ಲಿ ನಗರೋತ್ಥಾನ ಕಾಮಗಾರಿಗಳನ್ನು ಯಾವ ಯಾವ ಪಟ್ಟಣ, ನಗರಸಭೆ, ಪುರಸಭೆಗಳ ವ್ಯಾಪ್ತಿಯಲ್ಲಿ ತೆಗೆದುಕೊಳ್ಳಲಾಗಿದೆ;

ಆ) ಕರಾರು ಪ್ರಕಾರ ಯಾವಾಗ ಕಾಮಗಾರಿ ಮುಕ್ತಾಯಗೊಳಿಸಬೇಕಾಗಿತ್ತು;

ಇ) ವಿಳಂಬ ಮಾಡಿದ್ದರಿಂದ, ಹಾಗೂ ಇನ್ನು ವಿಳಂಬ ಆಗುತ್ತಿರುವುದರಿಂದ ಕರಾರು ಪ್ರಕಾರ ಗುತ್ತಿಗೆದಾರರಿಗೆ ದಂಡ ವಿಧಿಸಿ, ವಸೂಲಿಗೆ ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಖಮರುಲ್ ಇಸ್ಲಾಂ (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು.)

ಅ) ಹಾವೇರಿ ಜಿಲ್ಲೆಯ ಈ ಕೆಳಕಂಡ 8 ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಗರೋತ್ಥಾನ 1ನೇ ಮತ್ತು 2ನೇ ಹಂತದ ಯೋಜನೆಯಡಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿರುತ್ತದೆ.

1. ನಗರಸಭೆ ಹಾವೇರಿ
2. ನಗರಸಭೆ ರಾಣೇಬೆನ್ನೂರು
3. ಪುರಸಭೆ ಬ್ಯಾಡಗಿ
4. ಪುರಸಭೆ ಹಾನಗಲ್ಲ
5. ಪುರಸಭೆ ಸವಣೂರು
6. ಪುರಸಭೆ ಶಿಗ್ಗಾಂವ
7. ಪುರಸಭೆ ಬಂಕಾಪುರ
8. ಪಟ್ಟಣ ಪಂಚಾಯತಿ ಹಿರೇಕೆರೂರು

ಆ) **ಸಿಎಂಎಸ್ಎಂಟಿಡಿಪಿ ನಗರೋತ್ಥಾನ ಮೊದಲನೇ ಹಂತ:**

ಸಿಎಂಎಸ್ಎಂಟಿಡಿಪಿ ನಗರೋತ್ಥಾನ ಮೊದನಲೇ ಹಂತದ ಯೋಜನೆಯು 2009–10ನೇ ಸಾಲಿನಲ್ಲಿ ಪ್ರಾರಂಭವಾಗಿ 3 ವರ್ಷಗಳಲ್ಲಿ ಪೂರ್ಣಗೊಳ್ಳಬೇಕಾಗುತ್ತದೆ. ಸದರಿ ಯೋಜನೆಯಲ್ಲಿ ಶೇಕಡ 85.18ರಷ್ಟು ಪ್ರಗತಿಯನ್ನು ಸಾಧಿಸಲಾಗಿದೆ.

ಸಿಎಂಎಸ್ಎಂಟಿಡಿಪಿ ನಗರೋತ್ಥಾನ ಎರಡನೇ ಹಂತ:

ಸಿಎಂಎಸ್ಎಂಟಿಡಿಪಿ ನಗರೋತ್ಥಾನ ಎರಡನೇ ಹಂತದ ಯೋಜನೆಯ ರಾಣೇಬೆನ್ನೂರು ನಗರಸಭೆ, ಬ್ಯಾಡಗಿ ಮತ್ತು ಬಂಕಾಪುರ ಪುರಸಭೆ ಮತ್ತು ಹಿರೇಕೆರೂರು ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಕಾಮಗಾರಿಗಳ ಸ್ಥಳ ಹಸ್ತಾಂತರವನ್ನು ಆಗಸ್ಟ್ 2013ರಲ್ಲಿ ಮಾಡಲಾಗಿರುತ್ತದೆ ಹಾಗೂ ಉಳಿದ ನಗರಸಭೆ, ಹಾನಗಲ್, ಸವಣೂರು ಮತ್ತು ಶಿಗ್ಗಾಂವ ಪುರಸಭೆಯ ವ್ಯಾಪ್ತಿಯಲ್ಲಿ ಕಾಮಗಾರಿಗಳ ಸ್ಥಳ ಹಸ್ತಾಂತರವನ್ನು ಸೆಪ್ಟೆಂಬರ್ 2013ರಲ್ಲಿ ಮಾಡಲಾಗಿರುತ್ತದೆ. ಗುತ್ತಿಗೆದಾರರು ಕಾಮಗಾರಿಗಳನ್ನು ಆಗಸ್ಟ್ 2014 ಮತ್ತು ಸೆಪ್ಟೆಂಬರ್ 2014ರ ಒಳಗೆ ಪೂರ್ಣಗೊಳಿಸಬೇಕಾಗಿರುತ್ತದೆ.

ಇ) **ಸಿಎಂಎಸ್ಎಂಟಿಡಿಪಿ ನಗರೋತ್ಥಾನ ಮೊದಲನೇ ಹಂತ:**

ಸಿಎಂಎಸ್ಎಂಟಿಡಿಪಿ ನಗರೋತ್ಥಾನ ಮೊದಲನೇ ಹಂತದ ಯೋಜನೆಯಲ್ಲಿ ಹಾವೇರಿ ನಗರಸಭೆಯನ್ನು ಹೊರತುಪಡಿಸಿ ಉಳಿದೆಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಹಾವೇರಿ ನಗರಸಭೆಯಲ್ಲಿ ಕಾಮಗಾರಿಗಳ ಅನುಷ್ಠಾನದಲ್ಲಿನ ವಿಳಂಬಕ್ಕೆ ಕೆಳಕಂಡ ಕಾರಣಗಳಾಗಿರುತ್ತದೆ.

i) ಹಾವೇರಿ ನಗರ ವ್ಯಾಪ್ತಿಯಲ್ಲಿ ಹೊಸದಾಗಿ ಯುಜಿಡಿ ಕಾಮಗಾರಿಗಳು ಅನುಷ್ಠಾನಗೊಳಿಸುತ್ತಿರುವುದರಿಂದ ಯುಜಿಡಿ ಕಾಮಗಾರಿಗಳು ಪೂರ್ಣಗೊಳ್ಳುವವರೆಗೂ ರಸ್ತೆ ಕಾಮಗಾರಿಗಳನ್ನು ತಡೆ ಹಿಡಿಯಲಾಗಿದೆ.

ii) ಅನುಮೋದನೆಯಾದ ಕ್ರಿಯಾಯೋಜನೆಯ ಪ್ರಕಾರ ಟೆಂಡರ್ ಕರೆಯದೇ ಕಾಮಗಾರಿಗಳನ್ನು ವಿಭಜಿಸಿ ಟೆಂಡರ್ ಕರೆದ ಕಾರಣಗಳಿಂದಾಗಿ ಕಾಮಗಾರಿಗಳನ್ನು ತಡೆ ಹಿಡಿಯಲಾಗಿದೆ.

iii) ಕ್ರಿಯಾಯೋಜನೆಯಲ್ಲಿರುವ ಕೆಲವೊಂದು ಕಾಮಗಾರಿಗಳು ಬೇರೆ ಯೋಜನೆಯಡಿ ಈಗಾಗಲೇ ಕೈಗೊಳ್ಳಲಾಗಿರುವುದರಿಂದ ಕಾಮಗಾರಿಗಳನ್ನು ತಡೆ ಹಿಡಿಯಲಾಗಿದೆ.

ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಲ್ಲಿ ವಿಳಂಬ ಮಾಡಿದ ಗುತ್ತಿಗೆದಾರರಿಗೆ ಗುತ್ತಿಗೆ ಕರಾರಿನನ್ವಯ ದಂಡ ವಿಧಿಸಲು ಕ್ರಮ ವಹಿಸಲಾಗುವುದು.

ಸಿಎಂಎಸ್ಎಂಟಿಡಿಪಿ ನಗರೋತ್ಥಾನ ಎರಡನೇ ಹಂತ:

ಗುತ್ತಿಗೆದಾರರು ಜನವರಿ 2014ರ ಅಂತ್ಯಕ್ಕೆ ಮೊದಲನೇ ಹಂತದ ಮೈಲ್ ಸ್ಟೋನ್ (Mile Stone) ಸಾಧಿಸಬೇಕಾಗಿದ್ದು, ಮೇ 2014ರ ಅಂತ್ಯಕ್ಕೆ ಮೊದಲನೇ ಹಂತದ ಮೈಲ್ ಸ್ಟೋನ್ (Mile Stone) ಸಾಧಿಸಿರುತ್ತಾರೆ. ಕಾಮಗಾರಿಗಳ ಅನುಷ್ಠಾನದಲ್ಲಿ ವಿಳಂಬವಾಗಲು ಲೋಕಸಭಾ ಚುನಾವಣಾ ಮಾದರಿ ನೀತಿ ಸಂಹಿತೆಯು ಮತ್ತು ಮರಳು ಹಾಗೂ ಜಲ್ಲಿಯ ಅಲಭ್ಯತೆಯು ಮುಖ್ಯ ಕಾರಣಗಳಾಗಿರುತ್ತದೆ ಎರಡನೇ ಹಂತದ ಮೈಲ್ ಸ್ಟೋನ್ (Mile Stone)ನ್ನು 10ನೇ ಜುಲೈ 2014ರ ಒಳಗೆ ಸಾಧಿಸುವಂತೆ ಜಿಲ್ಲಾಧಿಕಾರಿಗಳು ದಿನಾಂಕ: 10–06–2014 ರಂದು ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಗುತ್ತಿಗೆದಾರರಿಗೆ ಸೂಚಿಸಿರುತ್ತಾರೆ ಮತ್ತು ಈ ಬಗ್ಗೆ ಗುತ್ತಿಗೆದಾರರಿಗೆ ನೋಟೀಸ್ ಸಹಾ ನೀಡಲಾಗಿದೆ.

ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಲ್ಲಿ ವಿಳಂಬ ಮಾಡಿದಲ್ಲಿ ಗುತ್ತಿಗೆ ಕರಾರಿನ ಮೈಲ್ ಸ್ಟೋನ್ (Mile Stone) ಅನ್ವಯ liquidity damages ಗಳನ್ನು ಗುತ್ತಿಗೆದಾರರ ಮೇಲೆ ವಿಧಿಸಲಾಗುವುದು. ಕಾಮಗಾರಿಗಳನ್ನು ಪೂರ್ಣಗೊಳಿಸಲು ನಿಗಧಿಪಡಿಸಿದ ಅವಧಿಯೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ವಿಫಲವಾದಲ್ಲಿ liquidity damages ಗಳನ್ನು ದಂಡವಾಗಿ ಪರಿವರ್ತಿಸಲಾಗುವುದು.